# ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ

**ವಿವೇಕ ನಗರ, ತೆಂಕಿಲ, ಪುತ್ತೂರು ದ.ಕ –574201,**

## ಪತ್ರಿಕಾಗೋಷ್ಠಿ ಪತ್ರ

## "ಪುತ್ತೂರಲ್ಲಿ ರಾಜ್ಯಮಟ್ಟದ ಅಗ್ರಿ ಟಿಂಕರಿಂಗ್ ಫೆಸ್ಟ್ ಸಾಗುತ್ತಿದೆ ಭರ್ಜರಿ ತಯಾರಿ – ವಿವೇಕಾನಂದ ಆಂಗ್ಲ ಮಾಧ್ಯಮ ಶಾಲಾ ಅಂಗಳ ತುಂಬ ಅನ್ವೇಷಣಾ–2019ರ ಕಂಪು"

### ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ)

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ), ಇದು ಡಿಸೆಂಬರ್ 13, 1915 ರಂದು ಪುತ್ತೂರು ಎಜ್ಯುಕೇಶನ್ ಸೊಸೈಟಿ(ರಿ) ಎಂಬ ಹೆಸರನಲ್ಲಿ ಸ್ಥಾಪನೆಗೊಂಡಿತು. ರಾಷ್ಟ್ರಚಿಂತನೆಯ, ಉತ್ತಮ ಗುಣಮಟ್ಟದ ಶಿಕ್ಷಣ, ಶಿಸ್ತು ಭಾರತೀಯ ಸಂಸ್ಕೃತಿ, ಸಂಪ್ರದಾಯ, ಸಂಯಮ ಹಾಗೂ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಮಂಡಿಸಿ, ಅಳವಡಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಈ ಸಂಸ್ಥೆಯು ಕಾರ್ಯ ಆರಂಭಿಸಿತು.

ಮೌಲ್ಯಯುತ್ತ ಶಿಕ್ಷಣವನ್ನು ನೀಡುವುದಕ್ಕಾಗಿ ವಿವೇಕಾನಂದ ವಿದ್ಯಾವರ್ಧಕ ಸಂಘವು ಶಿಶು ಮಂದಿರ, ಪ್ರಾಥಮಿಕ, ಪ್ರೌಢ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ, ತಾಂತ್ರಿಕ ಶಿಕ್ಷಣ, ಸ್ವರ್ಧಾತ್ಮಕ ಪರೀಕ್ಷಾ ತಯಾರಿ ಘಟಕ –ಯಶಸ್, ಮುಂತಾದ ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಸುಸೂತ್ರವಾಗಿ ನಡೆಸಿಕೊಂಡು ಬರುತ್ತಿದ್ದು, ಶಿಕ್ಷಣ ಕ್ಷೇತ್ರದ ಮುಂಚೂಣಿಯಲ್ಲಿದೆ. ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿ ಲಕ್ಷಾಂತರ ಜನಮನಗಳನ್ನು ಸೆಳೆದಿದೆ. ಶಿಕ್ಷಣದ ಜೊತೆಜೊತೆಗೆ ಸಮಾಜದ ಜನತೆಗೆ ನೆರವಾಗುವಂತಹ, ಯುವಜನತೆಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವಂತಹ ವಿವಿಧ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿರುವುದು ವಿವೇಕಾನಂದ ವಿದ್ಯಾವರ್ಧಕ ಸಂಘದ ವಿಶೇಷತೆ. ಇದೀಗ ಕೃಷಿ ಕ್ಷೇತ್ರದಲ್ಲಿ ನವೀನ ಆವಿಷ್ಕಾರಗಳಿಗೆ ಉತ್ತೇಜನ ನೀಡುವುದಕ್ಕಾಗಿ, ಅಂತಯೇ ದೇಶದ ಬೆನ್ನೆಲುಬಾಗಿ ನಿಂತಿರುವ ಕೃಷಿಕನ ಕಾಯಕವನ್ನು ಸರಳಗೊಳಿಸುವ ನಿಟ್ಟಿನಲ್ಲಿ ಕೃಷಿ ಪೂರಕ ನವೀನ ಆವಿಷ್ಕಾರಗಳ ರಾಜ್ಯಮಟ್ಟಾದ ವಿಜ್ಞಾನ ಮೇಳವನ್ನು ಲಘು ಉದ್ಯೋಗ ಭಾರತಿ ಕರ್ನಾಟಕ, ಕ್ಯಾಂಪ್ಕೋ, ಪಶುಸಂಗೋಪನಾ ಇಲಾಖೆ ಹಾಗೂ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಬೆಂಗಳೂರು ಇದರ ಸಹಯೋಗದೊಂದಿಗೆ ಹಮ್ಮಿಕೊಂಡಿರುತ್ತದೆ.

### ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಪರಿಚಯ:

1987ರಲ್ಲಿ 22 ವಿದ್ಯಾರ್ಥಿಗಳಿಂದ ಆರಂಭಗೊಂಡ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯು ಇಂದು 2763 ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ, ಯಶ್ವಸಿಯಾಗಿ ಮುನ್ನಡೆಯುತ್ತಿದೆ. ಪುತ್ತೂರು ಹಾಗೂ ಸುತ್ತಮುತ್ತಲಿನ ರಾಷ್ಟ್ರ ಚಿಂತನೆಯ, ಹಲವಾರು ಹಿತೈಷಿಗಳ, ಹಾಗೂ ಆಡಳಿತ ಮಂಡಳಿಯ ಮಾರ್ಗದರ್ಶನ ಮತ್ತು ಶಿಕ್ಷಕ, ಶಿಕ್ಷಕೇತರ ವೃಂದದವರ ಸತತ ಪರಿಶ್ರಮದ ಫಲವಾಗಿ ಇಂದು ಈ ಶಾಲೆಯು ನಮ್ಮ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ.

## ಅನ್ವೇಷಣಾ–2019

ಕೃಷಿಕ್ಷೇತ್ರವು ಇಂದು ಅನೇಕ ಮೂಲಭೂತ ಸೌಲಭ್ಯಗಳೊಂದಿಗೆ ಬೆಳೆಯುತ್ತಿದೆ. ಕೃಷಿಗೆ ಬೇಕಾದಂತಹ ತಂತ್ರಜ್ಞಾನ ಮತ್ತು ಉದ್ಯಮಗಳ ಬೆಳವಣಿಗೆಯೇ ಇದಕ್ಕೆ ಸಾಕ್ಷಿ. ಭಾರತ ಇಂದು ಮಹಾತ್ವಾಕಾಂಕ್ಷಿ ಗುರಿಯೊಂದನ್ನು ಹೊಂದಿದ್ದು, 2022ರ ವೇಳೆಗೆ ಕೃಷಿ ಮೂಲದಿಂದ ಎರಡು ಪಟ್ಟು ಆದಾಯವನ್ನು ಮಾಡಬೇಕೆಂಬ ಯೋಜನೆಯನ್ನು ರೂಪಿಸಿದೆ. ಈ ರಾಷ್ಟ್ರೀಯ ವಿಚಾರಧಾರೆಗೆ ಪೂರಕವಾಗಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯು ಕೃಷಿಕ್ಷೇತ್ರದ ಕಾರ್ಯಸೂಚಿಯಲ್ಲಿ ಬದಲಾಣೆಯನ್ನು ತರುವ ನಿಟ್ಟಿನಲ್ಲಿ **"ಅನ್ವೇಷಣಾ–2019"** ಎಂಬ ಉತ್ಸವವೊಂದನ್ನು ಪ್ರಥಮ ಬಾರಿಗೆ ಆಯೋಜಿಸುತ್ತಿದೆ. ನವ ಕೃಷಿಕರನ್ನು ಪ್ರೋತ್ಸಾಹಿಸಿ, ಬೆಳೆಸುವ ಸಲುವಾಗಿ ಆಯೋಜಿಸಿರುವ ಈ ಉತ್ಸವ ಇಡೀ ದೇಶದಲ್ಲೇ ವಿನೂತನ ಮತ್ತು ಪ್ರಥಮ ಪ್ರಯತ್ನವಾಗಿದೆ.

**"ಅನ್ವೇಷಣಾ** –2019 – ಇದು ರಾಜ್ಯಮಟ್ಟದ ಕೃಷಿ ಟಿಂಕರಿಂಗ್ ಉತ್ಸವ" ಇದು ಸೃಜನಾತ್ಮಕ ಆಲೋಚನೆಗನ್ನು ಹೊಂದಿದ ಒಬ್ಬಾತನ ಹೊಸ ಆವಿಷ್ಕಾರ, ಮಾದರಿ, ಯೋಜನಾ ವರದಿಗಳಿಗೆ ಉತ್ತಮ ವೇದಿಕೆಯನ್ನು ಒದಗಿಸುತ್ತದೆ. ಕೃಷಿಕ ಉದ್ಯಮಿ, ಸರಕಾರದ ನೀತಿ ಸಂಯೋಜಕ, ಮಾಧ್ಯಮ ಹಾಗೂ ಇತರ ಸ್ಟೇಕ್ ಹೋಲ್ಡರ್ಸ್ ಜೊತೆಗೆ ಸಂವಾದದ ಮುಖಾಂತರ ಪ್ರಸ್ತುತಪಡಿಸಲು ಉತ್ತಮ ವೇದಿಕೆಯನ್ನು ನೀಡುತ್ತಿದೆ.

ಈ ಸಮಾವೇಶದಲ್ಲಿ ವಿಜೇತರಾದವರನ್ನು ವಿವಿಧ ಸಂಸ್ಥೆ/ಕಂಪನಿಗಳು ಉತ್ತಮ ಬಹುಮಾನವನ್ನು ಕೊಟ್ಟು ಗುರುತಿಸುವರು. ಅಲ್ಲದೇ ಪ್ರಾಯೋಗಿಕವಾಗಿ ಉಪಯೋಗವಾಗುವ ವಿಷಯ/ ಉತ್ಪನ್ನಗಳನ್ನು ಮುಂದಿನ ವರ್ಷ ಇದೇ ದಿನಾಂಕದಂದು ಅದೇ ವಿದ್ಯಾರ್ಥಿ/ಭಾಗವಹಿಸಿದವರಿಂದ ಅನಾವರಣಗೊಳಿಸಿ ವಾಣಿಜ್ಯ ಉತ್ಪನ್ನವಾಗಿ ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಗುವುದು.

ನವೆಂಬರ್ 30 ಮತ್ತು ಡಿಸೆಂಬರ್ 1ರಂದು ನಡೆಯಲಿರುವ ಅಗ್ರಿ ಟಿಂಕರಿಂಗ್ ಫೆಸ್ಟ್ ಅನ್ವೇಷಣಾದಲ್ಲಿ ರಾಜ್ಯದ ವಿವಿಧ ಭಾಗದ ಸುಮಾರು 600ಕ್ಕಿಂತಲೂ ಮಿಕ್ಕಿ ವಿದ್ಯಾರ್ಥಿಗಳು ಹಾಗೂ ಕೃಷಿಕರು, ಕೃಷಿ ಪೂರಕ ಮಾದರಿಗಳೊಂದಿಗೆ ಭಾಗವಹಿಸಲು ಸನ್ನದ್ಧರಾಗಿದ್ದಾರೆ. ಈಗಾಗಲೇ ತಮ್ಮ ಬರುವಿಕೆಯನ್ನು ಖಚಿತಪಡಿಸಿಕೊಂಡಿರುತ್ತಾರೆ. ಅನ್ವೇಷಣಾ 2019ರ ಸುತ್ತಲೊಮ್ಮೆ ಕಣ್ಣಾಹಿಸಿದಾಗ ಕಾಣಬರುವುದು ತಂತ್ರಜ್ಞಾನ ಮತ್ತು ಜಾಗತೀಕರಣದ ನಾಗಾಲೋಟದಲ್ಲಿ ಕೃಷಿ ತಂತ್ರಜ್ಞಾನದ ಅಭಿವೃದ್ಧಿಗಾಗಿ ನವೀನ ಆವಿಷ್ಕಾರಗಳ ಸ್ಪರ್ಧೆ. ಈ ಸ್ಪರ್ಧೆಯಲ್ಲಿ ವಿಶೇಷವಾಗಿ ಮಾಧ್ಯಮ ವರ್ಗದ ರೈತರಿಗೆ ನೆರವಾಗುವಂತ ಸರಳ ಕೃಷಿ ಉಪಕರಣಗಳು ಪ್ರದರ್ಶನಗೊಳ್ಳಲಿದ್ದು ಮುಂಬರುವ ದಿನಗಳಲ್ಲಿ ಕೃಷಿಕರ ಮೊಗದಲ್ಲಿ ಭರವಸೆಯ ಆಶಾಕಿರಣಗಳನ್ನು ಮೂಡಿಸಲಿದೆ.

ಇಲ್ಲಿ ಭಾಗವಹಿಸಲಿರುವ ಸ್ಪರ್ಧಾರ್ಥಿಗಳ ಸಮೂಹವನ್ನು 4 ವಿಭಾಗಗಳಾಗಿ ಮಾಡಲಾಗಿದ್ದು ಇದರಲ್ಲಿ ಸಬ್ ಜೂನಿಯರ್ಸ್ (13 ವರ್ಷ ಮತ್ತು ಕೆಳಗಿನವರು)/ 8ನೇ ತರಗತಿ ತನಕ, ಜೂನಿಯರ್ (14ರಿಂದ 18 ವರ್ಷ) / 9ನೇ ತರಗತಿಯಿಂದ – ಪಿಯುಸಿ ತನಕ, ಸೀನಿಯರ್ಸ್ (ಪದವಿ ಮತ್ತು ತಾಂತ್ರಿಕ ಕಲಿಕೆ)/ ಐ.ಟಿ.ಐ, ಪ್ರೊಫೆಷನಲ್ ಕಾಲೇಜುಗಳು ಇತ್ಯಾದಿ, ಕೃಷಿಕರು / ಸಾರ್ವಜನಿಕರು ಎಂಬುದಾಗಿದೆ. ನೋಂದಾವಣೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನ್ನು ತೆರೆದಿದ್ದು ಆ ಮೂಲಕ ಸ್ಪರ್ಧಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೆ. ಅಂತಯೇ ಈ

ಸಮಾವೇಶದಲ್ಲಿ ನಾನಾ ಸಂಘಸಂಸ್ಥೆಗಳು ಭಾಗವಹಿಸುತ್ತಿದ್ದು ಅವರ ಮುಖಾಂತರ ಪ್ರಾಯೋಗಿಕವಾಗಿ ಉಪಯೋಗವಾಗುವ ಯೋಜನೆಗಳನ್ನು ಗುರುತಿಸಿ ಅವುಗಳನ್ನು ಒಂದು ವರ್ಷದ ಅವಧಿಯಲ್ಲಿ ವಾಣಿಜ್ಯ ಉತ್ಪನ್ನಗಳಾಗಿ ಮಾರುಕಟ್ಟೆಗೆ ಬಿಡುಗಡೆಗೊಳಿಸುವುದು ಅನ್ವೇಷಣಾ 2019ರ ವಿಶೇಷತೆ. ಇಲ್ಲಿ ಅಭ್ಯರ್ಥಿಗಳು ಸರಿಸುಮಾರು 5 ಉಪವಿಷಯಗಳಲ್ಲಿ ತಮ್ಮ ಮಾದರಿ ಅಥವಾ ಯೋಜನೆಗಳನ್ನು ತಯಾರಿಸಿ ಸ್ಪರ್ಧಿಸಬಹುದಾಗಿದೆ. ಅವುಗಳೆಂದರೆ –

1. **ಕೃಷಿಯಲ್ಲಿ ಆವಿಷ್ಕಾರ (ಕೃಷಿಯಲ್ಲಿ ನಾವೀನ್ಯತೆ) (ಆಧುನಿಕತೆ)**
2. **ಹೊಸ ಬಗೆಯ ಕೃಷಿಯಂತ್ರೋಪಕರಣಗಳು**
3. **ಮಣ್ಣು ಮತ್ತು ನೀರಿನ ನಿರ್ವಹಣೆ**
4. **ಕೃಷಿಯಲ್ಲಿ ಪಶು ಸಂಗೋಪನೆ ಬಳಕೆ**
5. **ನವೀನ ಕೃಷಿ ಉಪ ಉತ್ಪನ್ನಗಳು**

ಈ ಮೇಲಿನ ಯೋಜನೆಗಳ ಮೂಲಕ ವಿದ್ಯಾರ್ಥಿಗಳು, ಜನಸಾಮಾನ್ಯರು ಹಾಗೂ ಕೃಷಿಕರಿಗೆ ಉದ್ಯಮಿಗಳಾಗುವಂತಹ ಸುವರ್ಣಾವಕಾಶವನ್ನು ಒದಗಿಸಿಕೊಡಲು ಮುಂದಾಗಿದೆ ರಾಜ್ಯಮಟ್ಟದ ಅಗ್ರಿ ಟಿಂಕರಿಂಗ್ ಫೆಸ್ಟ್. ವಿಶೇಷವಾಗಿ ಇಲ್ಲಿ ಪ್ರತಿವಿಭಾಗಗಳಲ್ಲಿ ಅತ್ಯುತ್ತಮವಾದ ಎರಡು ಆವಿಷ್ಕಾರಗಳನ್ನು ಆಯ್ಕೆಮಾಡಿ ತಲಾ ಐದು ಸಾವಿರದಂತೆ ನಗದು ಬಹುಮಾನವನ್ನು ಆಯೋಜಿಸಲಾಗಿದೆ. ಅದಕ್ಕಾಗಿಯೇ ಕೃಷಿಕ್ಷೇತ್ರದಲ್ಲಿ ಪರಿಣತರಾಗಿರುವ ಮೌಲ್ಯಮಾಪಕರ ವಿಶೇಷ ತಂಡಗಳನ್ನು ರಚಿಸಲಾಗಿದೆ. ಆ ಮೂಲಕ ನೂತನ ಕೃಷಿ ಯಂತ್ರಗಳ ಅನ್ವೇಷಣೆಗೆ ಮುನ್ನುಡಿ ಬರೆಯಲಿದೆ.

## ಶಾಲಾ ಆವರಣದಲ್ಲಿ ಸಿದ್ಧತೆಗಳು ಹೇಗೆ.. ..?

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ಶಿಕ್ಷಣ, ಸಂಸ್ಕೃತಿ, ಮೌಲ್ಯವರ್ಧನೆ, ಸನಾತನ ಧರ್ಮದ ಬುನಾದಿಯಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಸಹಪಠ್ಯ ಚಟುವಟಿಕೆಗಳಿಗೆ ಪ್ರೋತ್ಸಾಹಿಸಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳೆವಣಿಗೆಗೆ ಮಹತ್ವವನ್ನು ನೀಡುವ ಸಂಸ್ಥೆ. ಈ ಸಂಸ್ಥೆಯು ತಾಲೂಕು, ಜಿಲ್ಲೆ, ರಾಜ್ಯಮಟ್ಟದಲ್ಲಿಯು ಸಾಧನೆಯ ಹಾದಿಯಲ್ಲಿ ತನ್ನದೇ ಆದ ಸ್ಥಾನವನ್ನು ಕಾಯ್ದಿರಿಸಿಕೊಂಡಿದೆ. ಇಂತಹ ಸಂಸ್ಥೆಯಲ್ಲಿ ಈ ದಿನಗಳಲ್ಲಿ ಅನ್ವೇಷಣಾ 2019–ಅಗ್ರಿ ಟಿಂಕರಿಂಗ್ ಫೆಸ್ಟ್‌ನ ಸಂಭ್ರಮ.

ಶಾಲಾ ಮುಖ್ಯವೇದಿಕೆ ಯಾದವಶ್ರೀ ಸಭಾಂಗಣದಲ್ಲಿ ವಿವಿಧ ವಿಭಾಗಗಳ ಸ್ಪರ್ಧೆಗಳಿಗೆ ಸೂಕ್ತವಾದ ಮಳಿಗೆಗಳು ನಿರ್ಮಾಣಗೊಳ್ಳುತ್ತಿದೆ. ಅದರಲ್ಲೂ ಕೃಷಿಯ ಪರಂಪರೆಯನ್ನು ಬಿಂಬಿಸುವ ತೆಂಗಿನಗರಿಗಳಿಂದ ಹೆಣೆದ ತಟ್ಟಿಗಳಿಂದ ಮಳಿಗೆಗಳು ಸಜ್ಜಾಗುತ್ತಿದೆ. ಸರಿಸುಮಾರು 70 ಮಳಿಗೆಗಳು ಒಂದೇ ಸೂರಿನಡಿ ಅಣಬೆಗಳಂತೆ ತಲೆಎತ್ತಿ ನಿಂತಂತಿದೆ. ಅಂದಾಜು 300ಕ್ಕೂ ಮೀರಿ ಮಳಿಗೆಗಳ ಅಗತ್ಯತೆ ಇರುವುದರಿಂದ ವಿವಿಧ ತರಗತಿ ಕೊಠಡಿಗಳನ್ನು ಬಳಸಲಾಗುತ್ತಿದೆ. ಅಂತಯೇ ಶಾಲಾ ಆವರಣ ಅಲಂಕಾರವು ವಿವಿಧ ಕೃಷಿಉತ್ಪನ್ನಗಳಿಂದಲೇ ತಯಾರಿಸಲು ಮುಂದಾಗಿರುವುದು ಮತ್ತೊಂದು ವಿಶೇಷತೆ. ತೆಂಗಿನ ಗೆರಟೆ ಹಾಳೆತಟ್ಟೆಗಳು, ವಿವಿಧ ಬಣ್ಣಗಳಿಂದ ಅಲಂಕರಿಸಿ ಈ ಸಮಾವೇಶವನ್ನು ಮತ್ತಷ್ಟು ಮೆರಗುಗೊಳಿಸಲಿದೆ.

ರಾಜ್ಯದ ನಾನಾ ಮೂಲೆಗಳಿಂದ ಬರುವ ಸ್ಪರ್ಧಾರ್ಥಿಗಳಿಗೆ ತಂಗುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅಂತೆಯೇ ಎಲ್ಲಾ ಕೃಷಿ ಮಾದರಿಗಳ ರಕ್ಷಣೆಗೂ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. ಸಮಾವೇಶವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದಕ್ಕಾಗಿ ವಿವಿಧ ತಂಡಗಳನ್ನು ರಚಿಸಿದ್ದು ಈಗಾಗಲೇ ಹಲವಾರು ಸುತ್ತಿನ ಸಭೆಗಳನ್ನು ಮುಖ್ಯೋಪಾಧ್ಯಾಯರು ಹಾಗೂ ಆಡಳಿತ ಮಂಡಳಿಯವರು ನಡೆಸಿದ್ದು ವಿವಿಧ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ.

## ವಿಭಾಗಗಳಲ್ಲಿ ಭಾಗವಹಿಸುವ ಒಟ್ಟು ತಂಡಗಳ ಸಂಖ್ಯೆ :

- ಸಬ್ ಜೂನಿಯರ್ಸ್ (13 ವರ್ಷ ಮತ್ತು ಕೆಳಗಿನವರು)/ 8ನೇ ತರಗತಿ ತನಕ = 164 ಮಾದರಿಗಳು
- ಜೂನಿಯರ್ (14ರಿಂದ 18 ವರ್ಷ) /9ನೇ ತರಗತಿಯಿಂದ – ಪಿಯುಸಿ ತನಕ = 99 ಮಾದರಿಗಳು
- ಸೀನಿಯರ್ಸ್ (ಪದವಿ ಮತ್ತು ತಾಂತ್ರಿಕ ಕಲಿಕೆ)/ ಐ.ಟಿ.ಐ, ಪ್ರೊಫೆಷನಲ್ ಕಾಲೇಜುಗಳು ಇತ್ಯಾದಿ= 29 ಮಾದರಿಗಳು
- ಕೃಷಿಕರು / ಸಾರ್ವಜನಿಕರು = 24 ಮಾದರಿಗಳು

ತಮ್ಮ ಹೆಸರುಗಳನ್ನು ನೋಂದಾಯಿಸಿರುತ್ತಾರೆ.

## ಮೌಲ್ಯಮಾಪಕರ ವಿವರ:

**ಅನ್ವೇಷಣಾ** 2019ರ ಒಟ್ಟು ಮೌಲ್ಯಮಾಪಕರು ಮೌಲ್ಯಮಾಪಣೆಗೆ ಆರು ತಂಡಗಳನ್ನು ರಚಿಸಲಾಗಿದ್ದು, ತಂಡದಲ್ಲಿ ಒಬ್ಬ ವಿಜ್ಞಾನಿ, ಕೃಷಿಕ, ಶಿಕ್ಷಕ, ಕೈಗಾರಿಕೋದ್ಯಮಿಗಳನ್ನು ಒಳಗೊಂಡಿರುತ್ತದೆ. ಈ ಮೌಲ್ಯಮಾಪನ ದಿನಾಂಕ 30.11.2019ನೇ ಶನಿವಾರ ಸಮಯ ಅಪರಾಹ್ನ 2.00ರಿಂದ 5.00ಗಂಟೆಯವರೆಗೆ ನಡೆಯಲಿದೆ.

ಈ ತಂಡದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಯಾವುದೇ ಸಂಸ್ಥೆಯ ಯಾವೊಬ್ಬ ಸದಸ್ಯರಾಗಲಿ, ಉಪನ್ಯಾಸಕರಾಗಲಿ, ಶಿಕ್ಷಕರಾಗಲಿ ಇರುವುದಿಲ್ಲ.

ದಿನಾಂಕ 01.12.2019ನೇ ರವಿವಾರದಂದು ಕೈಗಾರಿಕೋದ್ಯಮಗಳಿಂದ ಪ್ರಾಯೋಗಿಕ ಮೌಲ್ಯಮಾಪನ ಮತ್ತು ಯೋಜನೆಗಳ ಸ್ವೀಕಾರ[Patent], ಕೈಗಾರಿಕೋದ್ಯಮಗಳ ತಂಡವು ನೂತನ ಆವಿಷ್ಕಾರಗಳ ಮೌಲ್ಯಮಾಪನ ಮಾಡಲಿದ್ದು, ಅದರಲ್ಲಿ ಆಯ್ಕೆಯಾದ ಆವಿಷ್ಕಾರಗಳನ್ನು ತಮ್ಮ ಹೆಸರಿನಲ್ಲಿ ಪೇಟೆಂಟ್[Patent] ಮಾಡಿಕೊಳ್ಳುವವರು ಇದಕ್ಕೆ ಈಗಾಗಲೇ 100ಕ್ಕೂ ಮೀಗಿಲಾಗಿ ಕೈಗಾರಿಕೋದ್ಯಮದವರು ನೋಂದಾವಣೆ ಮಾಡಿರುತ್ತಾರೆ.

## ವಿಶೇಷ ಸಹಯೋಗ :

ಕ್ಯಾಂಪ್ಕೊ ನಿ., ಲಘು ಉದ್ಯೋಗ ಭಾರತಿ ಕರ್ನಾಟಕ, ಕೆ.ಎಮ್.ಎಫ್, ಪಶು ಸಂಗೋಪನೆ ಇಲಾಖೆ, ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಿ.ಪಿ.ಸಿ.ಆರ್.ಐ ಮತ್ತು ಡಿ.ಸಿ.ಆರ್.

## ಉದ್ಘಾಟನಾ ಸಮಾರಂಭ:

ಅನ್ವೇಷಣಾ 2019ರ ಉದ್ಘಾಟನಾ ಸಮಾರಂಭವು 30.11.2019ನೇ ಶನಿವಾರ ಸಮಯ ಪೂರ್ವಾಹ್ನ ಗಂಟೆ 9.30ಕ್ಕೆ ನಡೆಯಲಿದೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಡಾ.ಸಿ.ಅಶ್ವಥ್ ನಾರಾಯಣ್, ಮಾನ್ಯ ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ ಇವರು ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷರು, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು, ಇವರು ವಹಿಸಲಿದ್ದಾರೆ. ಅದೇ ರೀತಿ, ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಉಸ್ತುವರಿ ಸಚಿವರು, ದ.ಕ.ಜಿಲ್ಲೆ ಮೀನುಗಾರಿಕೆ,

ಬಂದರು, ಮತ್ತು ಒಳನಾಡು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ, ಶ್ರೀ ನಳಿನ್ ಕುಮಾರ್ ಕಟೀಲ್ ಮಾನ್ಯ ಸಂಸದರು, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ, ರಾಜ್ಯಾಧ್ಯಕ್ಷರು ಬಿಜೆಪಿ ಕರ್ನಾಟಕ, ಶ್ರೀ ಸಂಜೀವ ಮಠಂದೂರು, ಮಾನ್ಯ ಶಾಸಕರು ಪುತ್ತೂರು ವಿಧಾನಸಭಾ ಕ್ಷೇತ್ರ, ಶ್ರೀ ರಾಜೇಶ್ ನಾಯ್ಕ ಉಳಿಪ್ಪಾಡಿಗುತ್ತು, ಮಾನ್ಯ ಶಾಸಕರು ಬಂಟ್ವಾಳ ವಿಧಾನಸಭಾ ಕ್ಷೇತ್ರ ಹಾಗೂ ಪ್ರಗತಿಪರ ಕೃಷಿಕರು, ಶ್ರೀ ಆ.ಶ್ರೀ.ಆನಂದ್, ಅಧ್ಯಕ್ಷರು, ಸಾವಯವ ಕೃಷಿ ಮಿಷನ್ ಕರ್ನಾಟಕ ಸರ್ಕಾರ, ಟ್ರಸ್ಟಿ ಕೃಷಿ ಪ್ರಯೋಗ ಪರಿವಾರ ಹಾಗೂ ಶ್ರೀ ಪಿ.ಎಸ್ ಶ್ರೀಕಂಠದತ್ತ, ಅಧ್ಯಕ್ಷರು ಲಘು ಉದ್ಯೋಗ ಭಾರತಿ ಕರ್ನಾಟಕ ಇವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

**ಸಮಾರೋಪ ಸಮಾರಂಭ:**

ಅದೇ ರೀತಿ ಈ ಕಾರ್ಯಕ್ರಮದ ಸಮಾರೋಪ ಸಮಾರಂಭವು ದಿನಾಂಕ 01.12.2019ನೇ ರವಿವಾರ ಸಮಯ ಅಪರಾಹ್ನ 3 ಗಂಟೆಗೆ ನಡೆಯಲಿದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಕೆ.ಎಂ.ಕೃಷ್ಣ ಭಟ್, ಕಾರ್ಯದರ್ಶಿಗಳು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು, ಇವರು ವಹಿಸಲಿದ್ದು, ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಆರ್. ಸತೀಶ್ಚಂದ್ರ, ಅಧ್ಯಕ್ಷರು ಕ್ಯಾಂಪ್ಕೊ ನಿ., ಶ್ರೀ ಹರೀಶ್ ಪೂಂಜ, ಮಾನ್ಯ ಶಾಸಕರು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ, ಶ್ರೀ ರವಿರಾಜ್ ಹೆಗ್ಡೆ, ಅಧ್ಯಕ್ಷರು ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಶ್ರೀಮತಿ ಮೀನಾಕ್ಷಿ ಶಾಂತಿಗೋಡು, ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಾಗೂ ಶ್ರೀ ರಾಧಾಕೃಷ್ಣ ಬೋರ್ಕರ್, ಅಧ್ಯಕ್ಷರು ಪುತ್ತೂರು ತಾಲೂಕು ಪಂಚಾಯತ್ ಇವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

**ಕೃಷಿ ವಿಚಾರಗೋಷ್ಠಿಗಳು: ದಿನಾಂಕ 30.11.2019ನೇ ಶನಿವಾರ**

**ಪ್ರಥಮ ಅವಧಿ :**

**ಸಮಯ**: ಅಪರಾಹ್ನ 2.00ರಿಂದ 3.30ರವರೆಗೆ

**ವಿಚಾರ ಗೋಷ್ಠಿಯ ವಿಷಯ**: ಕೃಷಿಯಲ್ಲಿ ನೂತನ ಕಲ್ಪನೆಗಳು, ಹೊಸ ಉತ್ಪನ್ನಗಳ ಅಭಿವೃದ್ಧಿ ಹಾಗೂ ಯುವ ಕೃಷಿಕರಿಗಾಗಿ ಮೊಬೈಲ್ ಆ್ಯಪ್

**ಸಂಪನ್ಮೂಲ ವ್ಯಕ್ತಿಗಳು**: ಡಾ. ವಿಜಯ ವಿಠಲ, ನಿವೃತ್ತ ಸಿಇಓ GIAN-ಭಾರತ ಸರ್ಕಾರ ಶ್ರೀ ಎಸ್.ಎಂ ಜಮಖಂಡಿ, ನಿರ್ದೇಶಕರು ಎಂ.ಎಸ್.ಎಂ.ಇ–ಸೆಂಟರ್ ಆಫ್ ಎಕ್ಸಲೆನ್ಸ್, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ಡಾ.ಮೋಹನ್ ತಲಕಾಲುಕೊಪ್ಪ, ಹಿರಿಯ ವಿಜ್ಞಾನಿಗಳು, ಡಿ.ಸಿ.ಆರ್, ಪುತ್ತೂರು

**ದ್ವಿತೀಯ ಅವಧಿ**

**ಸಮಯ**: ಅಪರಾಹ್ನ 5.15ರಿಂದ 6.30ರವರೆಗೆ

**ವಿಚಾರ ಗೋಷ್ಠಿಯ ವಿಷಯ**: ಬೌದ್ಧಿಕ ಆಸ್ತಿ ಹಕ್ಕುಗಳು, ಪೇಟೆಂಟ್[Patent]

**ಸಂಪನ್ಮೂಲ ವ್ಯಕ್ತಿಗಳು:**

ಶ್ರೀ ಪಿ.ಎಸ್ ಶ್ರೀಕಂಠದತ್ತ, ಅಧ್ಯಕ್ಷರು ಲಘು ಉದ್ಯೋಗ ಭಾರತಿ ಕರ್ನಾಟಕ, ಶ್ರೀ ಬಿ.ಎಸ್.ಶ್ರೀನಿವಾಸನ್ ಉಪಾಧ್ಯಕ್ಷರು, ಲಘು ಉದ್ಯೋಗ ಭಾರತಿ ಕರ್ನಾಟಕ, ಶ್ರೀ ನಾರಾಯಣ ಪ್ರಸನ್ನ, ಕಾರ್ಯದರ್ಶಿಗಳು, ಲಘು ಉದ್ಯೋಗ ಭಾರತಿ ಕರ್ನಾಟಕ.

**ಕೃಷಿ ವಿಚಾರಗೋಷ್ಠಿಗಳು: ದಿನಾಂಕ 01.12.2019ನೇ ರವಿವಾರ**

**ತೃತೀಯ ಅವಧಿ:**

**ಸಮಯ**: ಪೂರ್ವಾಹ್ನ 10.00ರಿಂದ 11:30ರವರೆಗೆ

**ವಿಚಾರ ಗೋಷ್ಠಿಯ ವಿಷಯ**: ಕೃಷಿ ಉದ್ಯಮಶೀಲತಾ ಅಭಿವೃದ್ಧಿ

ಸಂಪನ್ಮೂಲ ವ್ಯಕ್ತಿಗಳು:

ಶ್ರೀ ಯಜ್ಞನಾರಾಯಣ ಕಮ್ಮಾಜೆ, ಮುಖ್ಯಸ್ಥರು, ಸೋನಾ ಗ್ರೂಪ್ ಆಫ್ ಕಂಪೆನಿಗಳು, ಬೆಂಗಳೂರು, ಶ್ರೀಮತಿ ಶೈಲಜಾ ವಿಠಲ್, ವ್ಯವಸ್ಥಾಪಕ ನಿರ್ದೇಶಕರು, ಧರ್ಮ ಟೆಕ್ನೋಲಜಿಸ್ ಪ್ರೈವೇಟ್ ಲಿಮಿಟೆಡ್ , ಶ್ರೀ ಪಿ.ಎಸ್ ಶ್ರೀಕಂಠದತ್ತ, ಅಧ್ಯಕ್ಷರು ಲಘು ಉದ್ಯೋಗ ಭಾರತಿ ಕರ್ನಾಟಕ, ಶ್ರೀ ಬಿ.ಎಸ್ ಶ್ರೀನಿವಾಸನ್, ಉಪಾಧ್ಯಕ್ಷರು ಲಘು ಉದ್ಯೋಗ ಭಾರತಿ ಕರ್ನಾಟಕ, ಶ್ರೀ ರವೀಂದ್ರನಾಥ್ ಕೌಶಿಕ್, ಇಸಿ ಸದಸ್ಯರು ಲಘು ಉದ್ಯೋಗ ಭಾರತಿ ಕರ್ನಾಟಕ, ಶ್ರೀ ನಾರಾಯಣ ಪ್ರಸನ್ನ, ಕಾರ್ಯದರ್ಶಿಗಳು ಲಘು ಉದ್ಯೋಗ ಭಾರತಿ ಕರ್ನಾಟಕ.

- **ಅದೇ ರೀತಿಯಾಗಿ ಅನ್ವೇಷಣೆ 2019ರ ಪ್ರದರ್ಶನಗೊಳ್ಳಲಿರುವ ಮಾದರಿಗಳ ಮತ್ತು ಯೋಜನೆಗಳ ಪ್ರದರ್ಶನವನ್ನು ನಮ್ಮ ಶಾಲಾ ಆವರಣ(ಯಾದವಶ್ರೀ ಸಭಾಂಗಣ) ಹಾಗೂ ತರಗತಿ ಕೊಠಡಿಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ.**
- **ಅದೇ ರೀತಿಯಾಗಿ ಇನ್ನಿತರ ಕೆಲವೊಂದು ಮಾದರಿಗಳ ಪ್ರದರ್ಶನಕ್ಕೆ ಶಾಲಾ ಕ್ರೀಡಾಂಗಣದ ಪಕ್ಕದ ತೋಟದಲ್ಲಿ ವ್ಯವಸ್ಥೆಗೊಳಿಸಲಾಗಿದೆ.**
- **ಈ ಕಾರ್ಯಕ್ರಮಕ್ಕೆ ಬರುವವರಿಗಾಗಿ ಶಾಲಾ ಕ್ರೀಡಾಂಗಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.**
- **ಈ ಕಾರ್ಯಕ್ರಮದಲ್ಲಿ ಮಾದರಿಗಳ ವೀಕ್ಷಣೆಗೆ ಬೆಳಿಗ್ಗೆ ಗಂಟೆ 9.00ರಿಂದ 5.00ಗಂಟೆವರೆಗೆ ಅವಕಾಶ ಇರುತ್ತದೆ.**
- **ವಿದ್ಯಾರ್ಥಿಗಳು ಮಾಡಿದಂತಹ ಮಾದರಿಗಳ ಛಾಯಾಚಿತ್ರ[Photo] ಹಾಗೂ ವಿಡಿಯೋಗಳ ಚಿತ್ರೀಕರಣವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.**

**ಅಗ್ರಿಟೆಂಕರಿಂಗ್ ಫೆಸ್ಟ್ ಅನ್ವೇಷಣಾದಲ್ಲಿ ಪಾಲ್ಗೊಳ್ಳಲು ಊರ, ಪರಊರ ರೈತ ಮಿತ್ರರನ್ನು, ಕೃಷಿಕ್ಷೇತ್ರದಲ್ಲಿ ಆಸ್ತಕರಾದ ಜನಸಾಮಾನ್ಯರನ್ನು ಆಹ್ವಾನಿಸಲಾಗಿದೆ.**